## ಶೂಸ್ ಆನ್ ದಿ ಡ್ಯಾನ್ಯೂಬ್ ಬ್ಯಾಂಕ್

# ಇತಿಹಾಸದ ಕ್ರೂರ ಪುಟ



**ಹಂಗೇರಿಯ ಡ್ಯಾನ್ಯೂಬ್ ನದಿ ದಡದಲ್ಲಿ ನಡೆದ ಅಲ್ಪಸಂಖ್ಯಾತರ ಹತ್ಯಾಕಾಂಡ ವಿಶ್ವದ ಕ್ರೂರ ಘಟನೆಗಳಲ್ಲಿ ಒಂದು. ಆ ಮಾರಣಹೋಮದಲ್ಲಿ ಜೀವ ಕಳೆದುಕೊಂಡವರಿಗಾಗಿಯೇ ಶೂಗಳ ಸ್ಮಾರಕ ನಿರ್ಮಿತವಾಗಿದೆ.**

■ ಕೋಟೂರ್ ಸಂಪತ್

‘ಏನಿದು, ನದಿ ತಟದಲ್ಲಿ ಶೂಗಳ ಸಾಲು? ಹೀಗೇಕೆ ಶೂಗಳನ್ನು ಇಲ್ಲಿ ಜೋಡಿಸಿಡಲಾಗಿದೆ?’ ಈ ಚಿತ್ರವನ್ನು ನೋಡಿದ ಯಾರ ಮನದಲ್ಲಾದರೂ ಈ ಪ್ರಶ್ನೆ ಹುಟ್ಟುತ್ತದೆ. ಶೂಗಳನ್ನು ನದಿ ಬದಿಯಲ್ಲಿ ಹೀಗೆ ಜೋಡಿಸಿರುವ ಹಿಂದೆಯೂ ಒಂದು ಕಥೆಯಿದೆ.

ಶೂಗಳ ಸಾಲು ಇರುವ ಈ ಜಾಗ ಹಂಗೇರಿಯಲ್ಲಿನ ರಾಷ್ಟ್ರೀಯ ಸ್ಮಾರಕ. ಇದರ ಹಿಂದೆ ಕರುಳು ಮಿಡಿಯುವ ಒಂದು ಕಥೆ ಇದೆ. ಮನುಷ್ಯನ ಕ್ರೌರ್ಯಕ್ಕೆ ಸಾಕ್ಷಿಯಾದ ಒಂದು ಕಾಲಘಟ್ಟವಿದೆ.

ಯೂರೋಪ್ ಖಂಡದ ಒಂದು ಪುಟ್ಟ ರಾಷ್ಟ್ರ ಹಂಗೇರಿ. ಜನನಿಬಿಡ ‘ಬುಡಾಪೆಸ್ಟ್’ ನಗರ ಇದರ ರಾಜಧಾನಿ. ನಗರದ ಮಧ್ಯ ಭಾಗದಲ್ಲಿ ಡ್ಯಾನ್ಯೂಬ್ ನದಿ ಹರಿಯುತ್ತದೆ. ಈಗಿನ ಈ ರಾಜಧಾನಿ ಬುಡಾಪೆಸ್ಟ್ ಶತಶತಮಾನಗಳ ಹಿಂದೆ ಪೂರ್ವದ ‘ಪೆಸ್ಟ್’, ಪಶ್ಚಿಮದ ‘ಬುಡಾ’ ಮತ್ತು ಉತ್ತರದ ‘ಒಬುಡಾ’ ಭಾಗವೆಂದು ಬೇರೆ ಬೇರೆಯಾಗಿತ್ತು. 1873ರಲ್ಲಿ ಈ ಮೂರೂ ಪ್ರಾಂತ್ಯಗಳನ್ನು ಒಗ್ಗೂಡಿಸಿ ‘ಬುಡಾಪೆಸ್ಟ್’ ಎಂದು ಹೊಸದಾಗಿ ನಾಮಕರಣ ಮಾಡಿ ಹಂಗೇರಿ ರಾಷ್ಟ್ರದ ರಾಜಧಾನಿ ಮಾಡಲಾಯಿತು. ‘ಪೆಸ್ಟ್’ ಭಾಗದ ಕಡೆಗಿನ ಡ್ಯಾನ್ಯೂಬ್ ನದಿ ತಟಾಕದಲ್ಲಿ ಈ ಶೂಗಳ ಸ್ಮಾರಕವನ್ನು ಸ್ಥಾಪಿಸಲಾಗಿದೆ.

ದ್ವಿತೀಯ ವಿಶ್ವ ಮಹಾಯುದ್ಧ ಸಮಯದಲ್ಲಿ, ಅಂದರೆ 1944ರಿಂದ 1945ರವರೆಗೂ ಅಧಿಕೃತ ಸೇನಾ ಪಡೆಯಲ್ಲದ, ತೀವ್ರತರ ಬಲಪಂಥೀಯ ಧೋರಣೆ/ಧ್ಯೇಯವುಳ್ಳ ‘ಹಂಗೇರಿಯನ್ ಆರೋ ಕ್ರಾಸ್ ಪಾರ್ಟಿ’ ಪಡೆ, ಬುಡಾಪೆಸ್ಟ್‌ನಲ್ಲಿ ಅಲ್ಪಸಂಖ್ಯಾತರಾಗಿದ್ದ ಇಪ್ಪತ್ತು ಸಾವಿರ ಯಹೂದಿಗಳನ್ನು ಅವರ ವಾಸಸ್ಥಳದಿಂದ ಹೊರಗೆಳೆದು ಈ ಡ್ಯಾನ್ಯೂಬ್ ನದಿ ದಂಡೆಯ ಉದ್ದಕ್ಕೂ ನಿಲ್ಲಿಸಿ ಗುಂಡಿಟ್ಟು ಹತ್ಯೆ ಮಾಡಿತು.

ಗುಂಡು ತಗಲುತ್ತಿದ್ದಂತೆ ಅವರೆಲ್ಲರೂ ಶವವಾಗಿ ನದಿಯಲ್ಲಿ ಬಿದ್ದು ಕೊಚ್ಚಿ ಹೋಗುತ್ತಿದ್ದರು. ಹೀಗೆ ಕೊಲ್ಲುವ ಮುನ್ನ ಅವರ ಶೂಗಳನ್ನು ಕಳಚಿ ನದಿಯ ತಟದಲ್ಲಿಡಿರೆಂದು ಆದೇಶಿಸಲಾಗಿತ್ತು. ಏಕೆಂದರೆ, ಆಗಿನ ಭೀಕರ ಯುದ್ಧ ಕಾಲದಲ್ಲಿ ಶೂಗಳು ಭಾರಿ ಬೇಡಿಕೆಯ ದುಬಾರಿ ವಸ್ತುವಾಗಿದ್ದವು. ಹತ್ಯಾಕಾಂಡದ ನಂತರ ಆರೋ ಕ್ರಾಸ್ ಪಾರ್ಟಿಯವರು ಶೂಗಳನ್ನು ಮಾರಿಕೊಂಡು ಹಣ ಮಾಡಿಕೊಳ್ಳುತ್ತಿದ್ದರು. ಹೆಣದ ವಸ್ತುಗಳ ಮಾರಾಟಕ್ಕಿಂತ ಜಿಗುಪ್ಸೆ ಹುಟ್ಟಿಸುವ ಸಂಗತಿ ಮತ್ತೊಂದುಂಟೇ?

ಇಂತಹ ಒಂದು ಮಾರಣಹೋಮದಲ್ಲಿ 3500 ಮಂದಿ ಬಲಿಪಶುಗಳನ್ನು (ಇದರಲ್ಲಿ 800 ಜನ ಯಹೂದಿಗಳು) ಡ್ಯಾನ್ಯೂಬ್ ನದಿ ದಡಕ್ಕೆ ಆರೋ ಕ್ರಾಸ್ ಪಾರ್ಟಿಯವರು ಎಳೆದು ತಂದು, ಅವರ ಶೂಗಳನ್ನು ಕಳಚಿಡಿಸಿ ನೇರ ನದಿಯೊಳಗೆ ಬೀಳುವಂತೆ ಎದೆಗೆ ಗುಂಡು ಹಾರಿಸಿ ಹತ್ಯೆ ಮಾಡಿದರು. ಡ್ಯಾನ್ಯೂಬ್ ನದಿಯ ದಡದಲ್ಲಿ ಜರುಗಿದ ಈ ಹತ್ಯಾಕಾಂಡ ವಿಶ್ವದ ಇತಿಹಾಸ ತಿಳಿಸುವ ಕ್ರೂರ ಘಟನೆಗಳಲ್ಲಿ ಒಂದಾಯಿತು.

ಬುಡಾಪೆಸ್ಟ್‌ನಲ್ಲಿ ಅಮಾನವೀಯ ದುಷ್ಟ ಚಿಂತನೆಯ ಸಂಸ್ಥೆಗಳು ಈ ರೀತಿ ವಿಧ್ವಂಸಕಾರಿ ಚಟುವಟಿಕೆಗಳಿಂದ ನಾಗರಿಕರನ್ನು ಸದೆಬಡಿದು ಡ್ಯಾನ್ಯೂಬ್ ನದಿಗೆ ದೂಡುತ್ತಿರುವಾಗ ಆಶಾಕಿರಣವಾಗಿ ಸ್ವೀಡನ್ ಮೂಲದ ರಾವುಲ್ ವಾಲನ್‌ಬರ್ಗ್ ಹಾಗೂ ಕರೋಲಿ ಸಾಬೊರಂತಹ ಮಾನವ ಪ್ರೇಮಿಗಳು, ಸಮುದಾಯ ಹಿತೈಷಿಗಳು ಬಂದರು. ಹತ್ಯೆಗೆಂದು ಕರೆದೊಯ್ಯಲಾಗುತ್ತಿದ್ದ ನೂರಾರು ಯಹೂದಿಗಳನ್ನು ಕಾಪಾಡಿ ಸುರಕ್ಷಿತ ಸ್ಥಳಕ್ಕೆ ಸ್ಥಳಾಂತರ ಮಾಡಿದ್ದರಂತೆ.

ಈ ಡ್ಯಾನ್ಯೂಬ್ ನದಿ ಬಳಿ ನಡೆದ ಹತ್ಯಾಕಾಂಡದಲ್ಲಿ ಜೀವ ಕಳೆದುಕೊಂಡವರಿಗಾಗಿ (ಹೆಚ್ಚಾಗಿ ಯಹೂದಿಗಳೇ) 16 ಏಪ್ರಿಲ್, 2005ರಲ್ಲಿ ಒಂದು ಸ್ಮಾರಕವನ್ನು ಚಲನಚಿತ್ರ ನಿರ್ದೇಶಕ ಕ್ಯಾನ್ ಟೋಗೆ ವಿನ್ಯಾಸ ಮಾಡಿ, ಶಿಲ್ಪಿ ಗ್ಯುಲಾ ಪಾಯರ್ ಸಹಾಯದೊಂದಿಗೆ ನದಿಯ ತಟಾಕದಲ್ಲೇ ನಿರ್ಮಿಸಲಾಯಿತು. ಅದುವೇ ಕಂಚಿನಿಂದ ಮಾಡಲಾದ ಶೂಗಳ ಸಾಲು. ಈ ಲೋಹದ ಶೂಗಳನ್ನು ನದಿ ದಡದ ಗಾರೆ ನೆಲಕ್ಕೆ ಕಬ್ಬಿಣದ ಮೊಳೆಗಳನ್ನು ಹೊಡೆದು ಭದ್ರಪಡಿಸಲಾಗಿದೆ. ಹೀಗೆ ನಿರ್ಮಿಸಲ್ಪಟ್ಟ ‘ಶೂಸ್ ಆನ್ ದಿ ಡ್ಯಾನ್ಯೂಬ್ ಬ್ಯಾಂಕ್’ ಸ್ಮಾರಕ ಈಗ ಪ್ರವಾಸಿಗರು ಭೇಟಿ ನೀಡುವ ಸ್ಥಳವಾಗಿದೆ.

ಸೆಪ್ಟೆಂಬರ್ 2014ರಲ್ಲಿ ಈ ಸ್ಮಾರಕದಿಂದ ಹಲವಾರು ಕಂಚಿನ ಬೂಟುಗಳನ್ನು ಕಳವು ಮಾಡಲಾಯಿತು. ‘ಇದು ಯಹೂದಿ ವಿರೋಧಿ ಕೃತ್ಯವೋ ಅಥವಾ ಕೇವಲ ಅರ್ಥಹೀನ ಕುಚೇಷ್ಟೆಯೋ?’ ಎಂದು ಇಸ್ರೇಲ್ ಪತ್ರಿಕೆಯೊಂದು ವರದಿ ಮಾಡಿತು. ಇದಕ್ಕೆ ಪ್ರತಿಕ್ರಿಯೆಯಾಗಿ ‘ಯಾವುದೇ ಅಪರಾಧ ವರದಿಯಾಗದ ಕಾರಣ ತನಿಖೆ ನಡೆಸುವುದಿಲ್ಲ’ ಎಂದು ಹಂಗೇರಿ ಪೊಲೀಸರು ಸ್ಪಷ್ಟನೆ ನೀಡಿ ಸುಮ್ಮನಾಗಿಬಿಟ್ಟರು.

ಪ್ರತಿಕ್ರಿಯಿಸಿ: feedback@sudha.co.in